# 3. ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಕಳೆದ 4 ದಶಕಗಳಿಂದ ಪರಿಸರ ಸಂರಕ್ಷಣೆಗೆ ಬಹಳಷ್ಟು ಕಾರ್ಯಕ್ರಮಗಳನ್ನು ಅನುಷ್ಠಾನಿಸಲಾಗಿದೆ. ಯೋಜನೆಯು 7 ಪ್ರಮುಖ ಕಾರ್ಯಕ್ರಮಗಳನ್ನು ಅನುಷ್ಠಾನಿಸಿ ಪರಿಸರ ಕಾಳಜಿಯನ್ನು ಜನತೆಯಲ್ಲಿ ಮೂಡಿಸಲು ಯಶಸ್ವಿಯಾಗಿದೆ. ಮುಖ್ಯವಾಗಿ ವನಸಂವರ್ಧನೆ, ಪರಿಸರ ಕಾಳಜಿ ಮತ್ತು ಸ್ವಚ್ಛತಾ ಅರಿವು, ಜಲಾನಯನ ಕಾರ್ಯಕ್ರಮ, ಹಸಿರು ಇಂಧನ, ಪರ್ಯಾಯ ಇಂಧನ ಕಾರ್ಯಕ್ರಮ, ಆಧುನಿಕ ಕೃಷಿ ಪದ್ಧತಿ, ರುದ್ರಭೂಮಿ ಅಭಿವೃದ್ಧಿ, ನಮ್ಮೂರು ನಮ್ಮಕೆರೆ., ಮುಂತಾದ ಕಾರ್ಯಕ್ರಮಗಳನ್ನು ವರ್ಷಂಪ್ರತಿ ಮಾಡಿಕೊಂಡು ಬಂದ ಪರಿಣಾಮವಾಗಿ ರಾಜ್ಯದಲ್ಲಿ ಹಸಿರು ಬೆಳೆಸಿ, ಉಸಿರು ಉಳಿಸಲು ಕಾರ್ಯಕ್ರಮ ರೂಪಿಸಿದೆ. ಪೂಜ್ಯ ಹೆಗ್ಗಡೆಯವರ ಕಲ್ಪನೆಯಂತೆ ಕಾಡು ಪ್ರಾಣಿಗಳಿಗಾಗಿ ಕಾಡಿನಲ್ಲಿ ಮತ್ತು ಕಾಡಿನಂಚಿನಲ್ಲಿ ಹಣ್ಣು ಹಂಪಲಿನ ಗಿಡಗಳನ್ನು ಬೆಳೆಸುವ ಅಭಿಯಾನವೊಂದನ್ನು ಆರಂಭಿಸಲು ಯೋಚಿಸಿ ಸರಕಾರಕ್ಕೆ ಪತ್ರ ಬರೆದ ಪರಿಣಾಮವಾಗಿ ಕಳೆದ 3 ವರ್ಷಗಳಿಂದ ಸಾಮಾಜಿಕ ಅರಣ್ಯೀಕರಣದ ಅಂಗವಾಗಿ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗಿದೆ.



ರಾಜ್ಯದ ಅರಣ್ಯ ಇಲಾಖೆ ಮತ್ತು ಸಚಿವರು ಶ್ರೀ ಕ್ಷೇತ್ರಕ್ಕೆ ಆಗಮಿಸಿ ಈ ನಿಟ್ಟಿನಲ್ಲಿ ಸರಕಾರ ಮಾಡಬಹುದಾದ ಎಲ್ಲಾ ಪ್ರಯತ್ನಗಳ ಬಗ್ಗೆ ಚರ್ಚಿಸಿ ಯೋಜನೆಯ ಸಹಭಾಗಿತ್ವದಲ್ಲಿ ಅರಣ್ಯ ಇಲಾಖೆಯು ಕೆಲಸ ನಿರ್ವಹಿಸಲು ಸೂಚಿಸಿದ ಪರಿಣಾಮವಾಗಿ ರಾಜ್ಯದಲ್ಲಿ ಒಟ್ಟು 5,538 ಕಾರ್ಯಕ್ರಮಗಳನ್ನು ನಡೆಸಿ 10 ಲಕ್ಷ ಗಿಡಗಳನ್ನು ಸುಮಾರು 6 ಸಾವಿರ ಎಕ್ರೆ ಅರಣ್ಯ ಭೂಮಿಯಲ್ಲಿ ನಾಟಿ ಮಾಡಿ ಇದಕ್ಕಾಗಿ ಗ್ರಾಮಾಭಿವೃದ್ಧಿ ಯೋಜನೆಯಿಂದ ರೂ. 59 ಲಕ್ಷ ಮೊತ್ತವನ್ನು ವಿನಿಯೋಗಿಸಿದೆ. ಶೌರ್ಯ ವಿಪತ್ತು ನಿರ್ವಹಣಾ ಕಾರ್ಯಕ್ರಮವಿದ್ದ ಯೋಜನಾ ವ್ಯಾಪ್ತಿಯಲ್ಲಿ ಗಿಡನಾಟಿ ಮಾಡುವ ಕಾರ್ಯವನ್ನು ಶೌರ್ಯ ಸ್ವಯಂಸೇವಕರಿಂದಲೇ ನಿರ್ವಹಿಸಲಾಗುತ್ತಿದೆ.

## 3.1 2023-24ನೇ ಸಾಲಿನ ಸಾಧನೆಯ ವಿವರ


| ಕ್ರ. ಸಂ. | ಪ್ರಾದೇಶಿಕ ಕಚೇರಿ | ನಡೆಸಿದ ಕಾರ್ಯಕ್ರಮಗಳು | ನಾಟಿ ಮಾಡಿದ ಸ್ಥಳದ ವಿಸ್ತೀರ್ಣ | ನಾಟಿ ಮಾಡಿದ ಗಿಡಗಳ ಸಂಖ್ಯೆ | | | ತಗಲಿದ ಮೊತ್ತ |
|---|---|---|---|---|---|---|---|
| | | ಒಟ್ಟು | ಒಟ್ಟು (ಎಕರೆ) | ಹಣ್ಣು-ಹಂಪಲು | ಇತರ | ಒಟ್ಟು ಗಿಡಗಳು | |
| 1 | ಉಡುಪಿ | 456 | 1133.75 | 48926 | 51728 | 100654 | 8,52,300.00 |
| 2 | ಚಿತ್ರದುರ್ಗ | 220 | 676 | 15925 | 65551 | 80110 | 4,83,930.00 |
| 3 | ಮೈಸೂರು | 64 | 140 | 18000 | 25399 | 46400 | 60,000.00 |
| 4 | ಧಾರವಾಡ | 180 | 222 | 7730 | 11092 | 13282 | 4,03,255.00 |
| 5 | ಕೊಪ್ಪಳ | 393 | 301.5 | 14945 | 23125 | 38070 | 6,86,511.00 |
| 6 | ಬೆಂಗಳೂರು | 298 | 450 | 12952 | 17136 | 29738 | 5,42,099.00 |
| 7 | ಕಲ್ಬುರ್ಗಿ | 170 | 126.5 | 11530 | 12007 | 22892 | 3,20,410.00 |
| | ಒಟ್ಟು | 1781 | 3049.75 | 130008 | 206038 | 334756 | 33,48,505.00 |

## 3.2. ಸಾಮಾಜಿಕ ಅರಣ್ಯೀಕರಣದ ಸಮಗ್ರ ಪ್ರಗತಿಯ ಪಕ್ಷಿನೋಟ

| ಕ್ರ. ಸಂ. | ವಿವರ | 2021-22 | 2022-23 | 2023-24 | ಒಟ್ಟು |
|---|---|---|---|---|---|
| 1 | ನಡೆಸಿದ ಕಾರ್ಯಕ್ರಮಗಳು | 1,804 | 2,528 | 1,781 | 6,113 |
| 2 | ಗಿಡಗಳು | 1,16,000 | 6,52,297 | 3,34,756 | 11,03,053 |
| 3 | ವಿಸ್ತೀರ್ಣ (ಎಕ್ರೆ) | 1,343 | 2,918 | 3,063 | 7,324 |
| 4 | ನಾಟಿ ಮಾಡಿದ ಹಣ್ಣಿನ ಗಿಡಗಳು | 55,838 | 1,84,561 | 1,30,668 | 3,71,067 |
| 5 | ನಾಟಿ ಮಾಡಿದ ಇತರ ಗಿಡಗಳು | 60,162 | 4,67,736 | 2,04,088 | 7,31,986 |
| 6 | ಯೋಜನಾ ಕಚೇರಿಯಿಂದ ಖರ್ಚಾದ ಮೊತ್ತ | 11,50,653.00 | 20,72,340.00 | 33,48,505.00 | 65,71,498.00 |
| 7 | ವಿಪತ್ತು ನಿರ್ವಹಣೆ ಬಜೆಟ್‌ನಿಂದ ಖರ್ಚಾದ ಮೊತ್ತ | 2,51,900.00 | 86,725.00 | - | 3,38,625.00 |

## 3.3 ಕಾರ್ಯಕ್ರಮ ಅನುಷ್ಠಾನಕ್ಕಾಗಿ ನೀಡಿದ ಸುತ್ತೋಲೆಗಳು

| ಕ್ರ. ಸಂ. | ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1 | 20/EDOO/2023-24, 06.05.2023 | 2023-24ನೇ ಸಾಲಿನ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದಡಿ ಗಿಡನಾಟಿ ಕಾರ್ಯಕ್ರಮ ಮಾಡುವ ಬಗ್ಗೆ. |
| 2 | 23.05.2023 | ಕ್ರಿಯಾಯೋಜನೆ 2023-24ರ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ, ಅರಣ್ಯ ಇಲಾಖೆಯಿಂದ ಸಸಿಗಳನ್ನು ಪಡೆಯುವ ಕುರಿತು. |





ಬೆಳ್ತಂಗಡಿ ತಾಲೂಕಿನ ಪುರುಷರ ಮಜಲು ಪರಿಸರದ ತಣ್ಣೀರುಪಂಥ ಮೀಸಲು ಅರಣ್ಯ ಪ್ರದೇಶದಲ್ಲಿ
ಹಣ್ಣು ಹಂಪಲಿನ ಮತ್ತು ಬಳ್ಳಿ, ತರಕಾರಿಗಳ ಬೀಜ ಬಿತ್ತನೆ ಹಾಗೂ ಸಸಿಗಳ ನಾಟಿ ಕಾರ್ಯಕ್ರಮ